ಆಗಿಯೇ ಹೋಯಿತೆಂಬಂತೆ ಕೊರೆಯುವ ನಡುಕವಿತ್ತು.

"ಬೇರೆ ಯಾರೂ ಅಲ್ಲ. ಈ ಹುಡುಗಿಯೇ ಆಪತ್ತು ತಂದಿಡುತ್ತಾಳೆ. ಇವತ್ತು ನಮಗೆ ಮಾತ್ರ ಅಲ್ಲ ಇಡೀ ಊರಿಗೆ ಆಪತ್ತು ತಂದಿಡುತ್ತಿದ್ದಳು. ನಮ್ಮ ಹುಸೈನನಿಂದಾಗಿ ಅದು ಸದ್ಯಕ್ಕೆ ತಪ್ಪಿತು. ಬೆಳಗ್ಗೆ ನಮ್ಮ ಹುಸೈನಿ ಮಸೀದಿಯಿಂದ ಬರ್ತಿರ್ಬೇಕಾದ್ರೆ ಇವಳು ಮಾರ್ಗದಲ್ಲಿ ಹೋಗುತ್ತಿದ್ದಳಂತೆ. ಯಾವ ಮಾಯದಲ್ಲಿ ಮನೆಯಿಂದ ಹೋಗಿದ್ದಾಳೊ ನಮಗ್ಯಾರಿಗೂ ಗೊತ್ತಾಗ್ಲಿಲ್ಲ" ಮೊಯಿದಿನ್ಬ್ಯಾವ ಅಸಹನೆಯಿಂದ ಹೇಳಿದ. ಅನಿರೀಕ್ಷಿತ ಮಾತಿನಿಂದ ತತ್ತರಿಸಿದರೂ ತೋರಿಸಿಕೊಳ್ಳದೆ, "ಒಳಗೆ ಕುಳಿತು ಮಾತಾಡುವ ಬನ್ನಿ" ಅನ್ನುತ್ತ ಸರಿದು ನಿಂತ. ಮನೆಯೊಳಗೆ ಹೋಗಿದ್ದೇ ಹುಸೈನ್ಬ್ಯಾವ, "ಇವಳು ಯಾರಿಗೂ ಗೊತ್ತಿಲ್ಲದೆ ಮನೆಯಿಂದ ಓಡಿ ಹೋಗಿ ಏನಾದ್ರೂ ಅನಾಹುತ ಆಗಿದಿದ್ರೆ; ನಾಳೆ ಅವಳ ಅಪ್ಪ ನಾವೇ ಏನೋ ಮಾಡಿದ್ದೇವಂತ ಜನ ಸೇರಿಸಿದಿದ್ರೆ ಪೊಲೀಸರಾದ್ರೂ ನಮ್ಮನ್ನ ನಂಬ್ತಿದ್ರಾ? ಯಾವ ಜನರೂ ನಮ್ಮನ್ನು ನಂಬ್ತಿರಲಿಲ್ಲ. ಊರಿಗೇ ಬೆಂಕಿ ಬೀಳ್ತಿತ್ತು ಫಕೀರಿಚ್ಚ" ಅಂದ.

ರಕ್ಷಾ ಒಂದೇ ಉಸಿರಲ್ಲಿ, "ಫಕೀರಿಚ್ಚ, ನನ್ನನ್ನೀಗ್ಲೆ ಮನೆಗೆ ಕರ್ಕೊಂಡು ಹೋಗಿ. ನಂಗೆ ಪೊಪ್ಪ ಬೇಕು. ಅಮ್ಮ ಬೇಕು. ಶಾಲೆಗೆ ಹೋಗ್ಬೇಕು." ಅನ್ನುತ್ತ ಅಳಲಾರಂಭಿಸಿದಳು.

ಆರೀಫನ ಅಮ್ಮಿ ಮೈಮೂನ,"ಅವಳು ಕೇಳಿದ ಹಾಗೆ ಅವಳನ್ನು ಅವಳ ಮನೆಗೆ ಕರ್ಕೊಂಡು ಹೋಗಿ. ಇಲ್ಲದಿದ್ರೆ ಇದು ಸರಿಯಾಗ್ಲಿಕ್ಕಿಲ್ಲ" ಮೈಮೂನಳ ಮಾತಿನ ಧಾಟಿಗೆ ಅಷ್ಟು ಹೊತ್ತು ಒಳ ಬಾಗಿಲ ಬುಡದಲ್ಲಿ ನಿಂತು ಇವರ ಮಾತು ಕೇಳುತ್ತಿದ್ದ ನೆಬಿಸುಮ್ಮ, "ನೀವು ಹಾಗೆಲ್ಲ ನಮ್ಮ ಮಾಪ್ಳೆಯ ಮೇಲೆ ಜವಾಬ್ದಾರಿ ಹಾಕಿದ್ರೆ ಹೇಗೆ? ನೀವು ಹೇಳಿದ ಕೂಡ್ಲೆ ಹಾಗೆಲ್ಲ ಮಾಡ್ಲಿಕ್ಕಾಗ್ತದಾ? ನಿಮ್ಮ ಹುಡುಗನಿಗೆ ಇವಳನ್ನು ಕಟ್ಟಿಕೊ ಅಂತ ನಮ್ಮ ಮಾಪ್ಳೆ ಹೇಳಿದ್ದಾರಾ? ಸುರೇಶ ಎಂತ ಅಷ್ಟು ಸುಲಭದಲ್ಲಿ ಇವಳನ್ನು ಮನೆಗೆ ಸೇರಿಸ್ತಾನಾ?" ಕೇಳಿದಳು.

"ನೆಬಿಸುಮ್ಮ, ನಮಗೆ ಈಗ ಫಕೀರಿಚ್ಚನೇ ಒಂದು ದಾರಿ ತೋರಿಸ್ಬೇಕು. ಇವಳಿಗೆ ಅವನು ಬೇಡ. ಅವನಿಗೆ ಇವಳು ಬೇಡಾಂತಾಗಿದೆ. ಆವತ್ತು ಬುರ್ಕಾ, ನಿಸ್ಕಾರ ಅಂತ ಕುಣಿದವ್ಳಿಗೆ ಈಗೆಂತದ್ದೂ ಬೇಡಂತೆ. ಎಂತಾದ್ರೂ ಹೇಳಿದ್ರೆ ಕಿವುಡಿ ಹಾಗೆ ಮಾಡ್ತಾಳೆ. ಸುರುವಿಗೆ ಎರಡು ತಿಂಗಳು ನೇರ್ಪಕ್ಕಿದ್ದವಳು ಈಗೀಗ ಆರೀಫನ ಹತ್ತಿರ ರಕ್ಕಸಿಯ ಹಾಗೆ ಜಗಳ ಮಾಡ್ತಾಳೆ. ಹಾಗೆ ನೋಡಿದ್ರೆ ನಮ್ಮ ಆರೀಫ ಅವಳನ್ನು ಬೇಡ ಅಂತ ಹೇಳ್ಲಿಲ್ಲ. ಅವನಿಗಿಂತ ಅವಳಿಗೇ ಅವನು ಬೇಡ ಅಂತ ಆಗಿದ್ದು. ಸಾಲದ್ದಕ್ಕೆ ಕಾಲೇಜಿಗೆ ಹೋಗ್ತೇನೆ ಅಂತ ಹೊಸ ಸಂಗತಿ ಹೇಳ್ಲಿಕ್ಕೆ ಸುರುಮಾಡಿದಾಳೆ. ಈಗ ಇವಳು ಶಾಲೆಗೆ ಹೋಗ್ತೇನೆ ಅಂತ ಹೇಳುವವಳು ಇವನೊಟ್ಟಿಗೆ ಬಂದದ್ದೆಂತದಕ್ಕೆ. ಹೀಗೆಲ್ಲ ಮಾಡಿದ್ರೆ ನಾವು ಬದುಕುವುದು ಹೇಗಂತೆ. ಯಾವಾಗ ಎಂತ ಅನಾಹುತ ಆಗ್ತದೋ ಅಂತ ಹೆದ್ರಿಕೆ ಆಗ್ತಾ ಉಂಟು ನಮ್ಗೆ. ಬೇರೆ ನಿವೃತ್ತಿಯಿಲ್ಲದೆ ಎಲ್ಲರೂ ಸುಮ್ಮನಿದ್ದೇವೆ. ನಮಗ್ಯಾರಿಗೂ ಗೊತ್ತಾಗದೆ ಇವಳು ಎಲ್ಲಿಗಾದ್ರು ಓಡಿಹೋದ್ರೆ ನಾವು ಜೈಲಿಗೆ ಹೋಗ್ಬೇಕಾದೀತು" ಅನ್ನುತ್ತ ಮೈಮೂನ ನೆಬಿಸುಮ್ಮನ ಕೈ ಹಿಡಿದು ಕಣ್ಣೀರು ಹಾಕಿದಳು.

"ನಾನ್ಯಾಕೆ ಎಲ್ಲೆಲ್ಲಿಗೆ ಓಡಿ ಹೋಗ್ಲಿ. ನಾನು ನನ್ನ ಮನೆಗೆ ಹೋಗ್ತೇನೆ" ರಕ್ಷಾಳ ಮಾತು ಮುಗಿಯುವ ಮೊದಲೇ, "ನೀನೆಂತ ತಿಳ್ಕೊಂಡಿದ್ದಿ? ನಿನ್ನ ಅಪ್ಪ ಅಷ್ಟು ಸುಲಭದಲ್ಲಿ ನಿನ್ನ ಮನೆ ಸೇರಿಸ್ತಾನಾ?" ನೆಬಿಸುಮ್ಮ ಗದರಿಸಿದರು. ರಕ್ಷಾ ಅಳಲಾರಂಭಿಸಿದಳು.

"ಈ ಆರೀಫನೂ ನನ್ನ ಹಾಗೇ ಅಲ್ವಾ. ಅವನನ್ನು ಅವನ ಅಪ್ಪ, ಅಮ್ಮ ಇಟ್ಕೊಳ್ಳುದಿಲ್ವಾ? ಮತ್ತೆ ನನ್ನ ಅಪ್ಪ, ಅಮ್ಮ ನನ್ನನ್ನು ಮನೆಗೆ ಯಾಕೆ ಸೇರಿಸ್ಬಾರ್ದು ಅಂತ?" ಬಿಕ್ಕುತ್ತಲೇ